ರಾತ್ರಿ ಸುಮಾರು ಹನ್ನೊಂದು ಗಂಟೆಗೆ ಭೂಪತಿಗೆ ಥಟ್ಟನೆ ಎಚ್ಚರವಾಗಿ ನೀರು ಕುಡಿಯಬೇಕೆನಿಸಿತು. ಎದ್ದು ನೋಡುತ್ತಾನೆ ನೀರೇ ಇಟ್ಟಿಲ್ಲ. ರಂಗ ತನ್ನ ಬೇಕು ಬೇಡಗಳನ್ನೆಲ್ಲಾ ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದ. ಈ ಪದ್ಮಳೋ ನಿನ್ನೆ ನೀರು ಇಟ್ಟಿದ್ದಳು. ಇಂದು ಮರೆತಿದ್ದಾಳೆ. ಭೂಪತಿ ಹಾಲ್ ಗೆ ಬಂದ. ರಂಗನ ಕೋಣೆಯಲ್ಲಿ ದೀಪ ಉರಿಯುತ್ತಿತ್ತು. ನಂದಿಸೋಣವೆಂದು ಆ ಕಡೆ ಹೋದ. ಕೋಣೆಯಿಂದ ಮಾತುಗಳು ಕೇಳಿಸುತ್ತಿತ್ತು. ಹಿಂದಿನಂತೆ ಮೆಲ್ಲಗೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಬಟ್ಟೆ ಒಗೆಯುವ ಕಲ್ಲಿನ ಮೇಲೆ ಕುಳಿತ. ಇಬ್ಬರೂ ತಿನ್ನುತ್ತಾ ಮಾತನಾಡುತ್ತಿದ್ದರು.



'ಈ ರೊಟ್ಟಿ ರುಚಿ ನೋಡು ರಂಗ. ನಿನ್ನ ತಂಗಿ ಮಾಡಿ ಕೊಟ್ಟಿರುವುದು' ಹೇಳಿದ ಗೋಪಾಲ.

'ಖಂಡಿತ ಬೇಡ, ಸಾಕು ಕಣೋ, ಎಷ್ಟೊಂದು ತಿನ್ನಿಸುತ್ತಿದ್ದಿಯಾ' ಎಂದ ರಂಗ.

'ಏನು ಮಾಡುವುದು, ಪ್ರತಿಯೊಬ್ಬರೂ ಬಲವಂತದಿಂದ ಕೊಟ್ಟಿದ್ದಾರಲ್ಲಾ. ಇಷ್ಟನ್ನು ತಿಂದು ಬಿಡು' ಎಂದು ಗೋಪಾಲ ಒಂದು ತುಣುಕು ರೊಟ್ಟಿಯನ್ನು ರಂಗನ ಬಾಯಿಗೆ ಹಾಕಿದ. ಆಗ ರಂಗನ ಮುಖವೋ ಆನಂದ ದಿಂದ ಇಷ್ಟಗಲವಾಗಿತ್ತು. 'ಇದೋ ನೀನೂ ತಿನ್ನು' ಎಂದು ಅವನೂ ರೊಟ್ಟಿಯ ಚೂರೊಂದನ್ನು ಗೋಪಾಲನ ಬಾಯಿಗೆ ತುರುಕಿದ. ಇಬ್ಬರೂ ಕೆಲವು ಕೈ ತುತ್ತು ಗಳನ್ನು ಬದಲಾಯಿಸಿ ಕೊಂಡರು. ಇಬ್ಬರ ಮುಖಗಳಲ್ಲೂ ಪ್ರಸನ್ನ ಕಳೆ.

'ಗೋಪಾಲ ತುಂಬಾ ಹೊತ್ತಾಯಿತು. ಮುಂಜಾನೆ ನೀನು ಬೇಗನೇ ಹೊರಡ ಬೇಕಲ್ಲ. ಇನ್ನು ಮಲಗೋಣ' ಎಂದ ರಂಗನ ದೃಷ್ಟಿ ದೂರದಲ್ಲಿದ್ದ ತಟ್ಟೆಯ ಮೇಲೆ ಬಿತ್ತು.

'ಪಾರ್ವತಿ ನಮಗೆ ಎಂದು ಇಷ್ಟೊಂದು ಚಪಾತಿ ಪಲ್ಯ ತಂದಿಟ್ಟಿದ್ದಾಳೆ. ನಾವು ತಿಂದಿಲ್ಲ ಎಂದು ಗೊತ್ತಾದರೆ ಖಂಡಿತ ಕೋಪಿಸಿ ಕೊಳ್ಳುತ್ತಾಳೆ' ಎಂದ.

'ಅದನ್ನು ನಾನು ನನ್ನ ಬುತ್ತಿಯಲ್ಲಿ ಕಟ್ಟಿಕೊಳ್ಳುತ್ತೇನೆ. ನೀನು ಚಿಂತೆ ಮಾಡಬೇಡ' ಉತ್ತರಿಸಿದ ಗೋಪಾಲ ಭೂಪತಿ ನಿಧಾನವಾಗಿ ತನ್ನ ಕೋಣೆಗೆ ಬಂದು ಮಲಗಿದ.

ನಸುಕಿನಲ್ಲೇ ಗೋಪಾಲ ಎದ್ದು ಹೊರಡಲು ತಯಾರಾದ. ರಂಗ, ಗೋಪಾಲ ಇಬ್ಬರೂ ಹಾಲ್ ಗೆ ಬಂದರು.

'ಹೋಗುವಾಗ ನಿನ್ನ ಯಜಮಾನರಿಗೆ ಒಂದು ಮಾತು ಹೇಳುವುದು ಉಚಿತವೇನೋ' ಹೇಳಿದ ಗೋಪಾಲ 'ಅವರಿಗೂ ನಸುಕಿನಲ್ಲೇ ಏಳುವ ಅಭ್ಯಾಸ. ಎದ್ದಿದ್ದಾರೋ ನೋಡುತ್ತೇನೆ' ಎಂದ ರಂಗ.

ಇವರಿಬ್ಬರ ಮಾತು ಕೇಳಿ ಭೂಪತಿಯೇ ಹೊರಗೆ ಬಂದ. 'ಬರುತ್ತೇನೆ ಸ್ವಾಮಿ' ಎಂದ ಗೋಪಾಲ 'ಆಯಿತು. ದಾರಿ ಖರ್ಚಿಗೆ ದುಡ್ಡು ಏನಾದರೂ ಬೇಕೇನೋ?' ಕೇಳಿದ ಭೂಪತಿ 'ಬೇಡ ಸ್ವಾಮಿ. ಬೇಕಾದುದಕ್ಕಿಂತ ಸ್ವಲ್ಪ ಜಾಸ್ತಿಯೇ ಇದೆ' ಉತ್ತರಿಸಿದ ಗೋಪಾಲ.

ಬಾಗಿಲ ಬಳಿ ಬಿದ್ದಿದ್ದ ವೃತ್ತಪತ್ರಿಕೆ ಎತ್ತಿಕೊಂಡ ಭೂಪತಿ ತನ್ನ ಎಂದಿನ ಅಭ್ಯಾಸದಂತೆ ಕಿಟಿಕಿಯ ಬಳಿಯಿರುವ ಕುರ್ಚಿಯಲ್ಲಿ ಕುಳಿತ.

ರಂಗ ಮತ್ತು ಗೋಪಾಲ ಗೇಟಿನ ಬಳಿ ನಿಂತು ಇನ್ನಷ್ಟು ಮಾತನಾಡಿದರು. ಕೊನೆಗೆ ಗೋಪಾಲ ರಂಗನ ಎರಡೂ ಕೈಗಳನ್ನು ಹಿಡಿದುಕೊಡು ಒಂದು ಕ್ಷಣ ನಿಂತು ಮುಂದೆ ಹೆಜ್ಜೆ ಹಾಕಿದ. ರಂಗ ನಿಂತಲ್ಲೇ ಇದ್ದ. ಸ್ವಲ್ಪ ದೂರ ಹೋದ ಗೋಪಾಲ ಹಿಂತಿರುಗಿ ಕೈ ಬೀಸಿದ. ಹೀಗೆ ಇಬ್ಬರೂ ಕೈ ಬೀಸುವುದು ಗೋಪಾಲ ಬೀದಿಯ ಕೊನೆ ಸೇರುವವರೆಗೆ ನಡೆಯಿತು.

ರಂಗ ಹೆಗಲ ಮೇಲಿನ ಶಲ್ಯದಿಂದ ಕಣ್ಣೊರೆಸುತ್ತಾ ಒಳಗೆ ಬಂದ. ಅಲ್ಲಿ ಭೂಪತಿಯನ್ನು ನೋಡಿ 'ಕಾಫಿ ಮಾಡಿ ಕೊಡಲೇ ಸ್ವಾಮಿ ' ಎಂದ.

'ಬೇಡ ರಂಗ. ಇನ್ನೇನು ಪಾರ್ವತಿ ಬಂದು ಮಾಡುತ್ತಾಳಲ್ಲಾ. ಆಗ ಕುಡಿದರಾಯಿತು' ಉತ್ತರಿಸಿದ ಭೂಪತಿ.

ಒಳಗೆ ಹೋಗುತ್ತಿದ್ದ ರಂಗನನ್ನೇ ನೋಡಿದ ಭೂಪತಿಯ ಮನಸ್ಸಿನ ಮೂಲೆಯಲ್ಲಿ ಒಂದು ಸಣ್ಣ ನೋವು ಕಾಣಿಸಿಕೊಂಡಿತು. ಎಷ್ಟೊಂದು ಪುಣ್ಯವಂತ ಈ ರಂಗ. ರಂಗ ಮತ್ತು ಅವನ ಕುಟುಂಬದವರ ಹೃದಯದಲ್ಲಿ ಪ್ರೀತಿಯ ಸಾಗರವೇ ಹರಿಯುತ್ತಿದೆ. ತನಗೂ ಅಂತಹುದೊಂದು ಪ್ರೀತಿಯ ಅನುಭವ ಬೇಕಾಗಿತ್ತು. ಒಂದು ಹನಿಯಾದರೂ ಸಾಕು ಎಂದುಕೊಂಡ ಭೂಪತಿ. ಒಂದು ಹನಿ ಪಡೆಯಬೇಕಾದರೆ ಕನಿಷ್ಠ ಒಂದು ಬೊಗಸೆಯಷ್ಟು ಪ್ರೀತಿಯನ್ನಾದರೂ ತಾನು ಕೊಡಬೇಕು. ಅಂತಹ ಶಕ್ತಿ ತನ್ನ ಹೃದಯಕ್ಕಿಲ್ಲವೇ? ತಾನೀಗ ಒಂದು ದೂರವಾಣಿ ಕರೆ ಮಾಡಿದರೆ ಸಾಕು ತಮ್ಮೆಲ್ಲ ಕೆಲಸಗಳನ್ನು ಬಿಟ್ಟು ಓಡಿ ಬರುವ ಸಂಬಂಧಿಕರು, ಸ್ನೇಹಿತರು ತನಗಿದ್ದಾರೆ. ಎಲ್ಲರೂ ತನ್ನಿಂದ ಉಪಕೃತರಾದವರೇ. ಉಪಕೃತರಾಗದವರೂ ಕರೆದರೆ ಬರಬಹುದು. ಆದರೆ ಯಾಕೋ ಈ ರಂಗ ಗೋಪಾಲರ ಹೃದಯ ತಟ್ಟುವಂಥ ಪ್ರೀತಿಯ ಸ್ಪರ್ಶ ತನಗೆ ಆಗಲೇ ಇಲ್ಲ ಎಂದು ಅವನ ಭಾವನೆ. ಅಥವಾ ಇನ್ನೊಬ್ಬರ ಪ್ರೀತಿಯನ್ನು ಗುರುತಿಸಿ ಸ್ವೀಕರಿಸುವ ಶಕ್ತಿ ತನ್ನ ಹೃದಯಕ್ಕಿಲ್ಲವೇ? ಮುಂತಾದ ಯೋಚನೆಗಳು ಭೂಪತಿಯ ಮನಸ್ಸಿನಲ್ಲಿ ಹರಿದಾಡಿದುವು. ಕೇಳಿದವರಿಗೆ, ಕೇಳದವರಿಗೆ ಭೂಪತಿ ಕೈ ಎತ್ತಿ ಕೊಡುತ್ತಾನೆ. ಅಸಹಾಯಕರ ಬಗ್ಗೆ ಸ್ವಲ್ಪ ಮಟ್ಟಿನ ಕರುಣೆಯೂ ಅವನಿಗಿದೆ. ಆದರೆ ಇಂತಹ ನಿಷ್ಕಲ್ಮಶವಾದ ಪ್ರೀತಿಯನ್ನು ತನ್ನಿಂದ ಯಾರಿಗೂ ಕೊಡಲು ಸಾಧ್ಯವಾಗಿಲ್ಲ. ಹಾಗಾಗಿ ತನಗೆ ಪಡೆಯುವ ಹಕ್ಕೂ ಇಲ್ಲವೇನೋ ಎಂದುಕೊಂಡ. ಇಂತಹ ಒಂದು ಪ್ರೀತಿ ಇದೆ ಎಂಬ ಅರಿವಾದರೂ ತನಗೆ ಆಯಿತಲ್ಲ. ಬಹುಶಃ ತನ್ನ ಪಾಲಿಗೆ ದಕ್ಕಿದ್ದು ಈ ಅರಿವಷ್ಟೆ ಎಂದು ಸ್ವಲ್ಪ ಖಿನ್ನನಾದ.

ಯೋಚನೆಯಲ್ಲಿಯೇ ಮುಳುಗಿದ್ದ ಭೂಪತಿ ತಟ್ಟನೆ ಬೆಚ್ಚಿ ಬಿದ್ದ. ಒಂದು ರಾತ್ರಿಯಲ್ಲಿ ತಾನ್ಯಾಕೆ ಇಷ್ಟು ಭಾವುಕನಾದೆ? ಇಂತಹ ಭಾವಾತಿರೇಕದ ಪ್ರದರ್ಶನ ರಂಗನಂಥವರಿಗೆ ಹೊರತು ತನ್ನಂಥವನಿಗೆ ಯಾವತ್ತಿಗೂ ಖಂಡಿತ ಸಲ್ಲದು ಎಂದುಕೊಂಡ. ಮತ್ತು ಕೂಡಲೇ 'ರಂಗ' ಎಂದು ಸ್ವಲ್ಪ ಗಟ್ಟಿಯಾಗಿಯೇ ಕರೆದ. ಓಡುತ್ತಾ ಬಂದ ರಂಗ ಕೈ ಕಟ್ಟಿ ಬಗ್ಗಿ ನಿಂತು 'ಏನು ಸ್ವಾಮಿ' ಎಂದ. ಇಂತಹ ದೈನೇಸಿ, ಯಾಚಕನನ್ನು ತನಗಿಂತ ಪುಣ್ಯವಂತ ಎಂದುಕೊಂಡೆನಲ್ಲಾ . ಏನಾಗಿದೆ ನನಗೆ? ಮಂಕು ಬಡಿಯಿತೇ? ಆ ಕ್ಷಣದಲ್ಲಿ ತಾನು ಯಾವುದೋ ಗುಂಗಿನಲ್ಲಿದ್ದಿರಬೇಕು ಅಥವಾ ತನ್ನ ಮನಸ್ಸು ಭ್ರಾಮಕ ಸ್ಥಿತಿಯನ್ನು ತಲುಪಿದ್ದಿರಬೇಕು ಎಂದು ತನಗೆ ತಾನು ಸಮಾಧಾನ ಮಾಡಿಕೊಂಡ ಭೂಪತಿ.

'ಬಿಸಿ ಬಿಸಿ ಕಾಫಿ ಮಾಡಿ ತಗೊಂಡು ಬಾ' ಎಂದು ಗಟ್ಟಿಯಾಗಿ ಅಪ್ಪಣೆ ಮಾಡುವ ರೀತಿಯಲ್ಲಿ ಹೇಳಿದ ಭೂಪತಿ.

ಸ್ವಾಮಿಗಳು ಯಾಕೋ ಇಂದು ಎಂದಿನಂತೆ ಇಲ್ಲ ಎಂದು ಯೋಚಿಸುತ್ತಾ ರಂಗ ಅಡುಗೆ ಕೋಣೆಗೆ ಹೋದ. ಪಾರ್ವತಿ ಮಾಡುವ ಕಾಫಿಯನ್ನೇ ಅವರು ಯಾವಾಗಲೂ ಕುಡಿಯುವುದು. ತಾನು ಮಾಡುವ ಕಾಫಿ ಚೆನ್ನಾಗಿರುವುದಿಲ್ಲ ಎಂದು ಗೊತ್ತಿದ್ದೂ ಕಾಫಿ ಕೇಳಬೇಕಾದರೆ ಅವರ ಮನಸ್ಸಿಗೇನೋ ಆಗಿರಬೇಕು.

ಸ್ವಾಮಿಗಳು ಎಂದಿನಂತೆ ಇರುವ ಹಾಗೆ ಮಾಡು ದೇವಾ ಎಂದು ಮನಸ್ಸಿನಲ್ಲಿ ಹೇಳುತ್ತಾ ರಂಗ ಕಾಫಿ ತಯಾರಿಸುವಲ್ಲಿ ನಿರತನಾದ.